**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ವಿಜಯಸಿಂಗ್, ಶ್ರೀ ಅರವಿಂದ ಕುಮಾರ್ ಅರಳಿ, ಶ್ರೀ ಶರಣಪ್ಪ ಮಟ್ಟೂರು, ಡಾ:ಚಂದ್ರಶೇಖರ ಬಿ.ಪಾಟೀಲ್ ಹಾಗೂ ಶ್ರೀ ತಿಪ್ಪಣ್ಣ ಕಮಕನೂರ ಹಾಗೂ ಇತರರು ಪ್ರಸ್ತಾಪಿಸಿರುವ ಕಲ್ಯಾಣ ಕರ್ನಾಟಕ ಭಾಗದ ತೊಗರಿ ಖರೀದಿಗೆ ಬೆಂಬಲ ಬೆಲೆ ಮಿತಿಗೊಳಿಸಿರುವುದು ಹಾಗೂ ಪಹಣಿಯಲ್ಲಿರುವ ನಮೂದಾಗಿರುವ ಬೆಳೆಗೂ ರೈತರು ಮಾರಾಟ ಮಾಡಲು ತಂದಿರುವ ಬೆಳೆಗಳು ಬೇರೆ ಬೇರೆ ಇರುವುದರಿಂದ ತೊಗರಿ ಖರೀದಿಸಲು ನಿರಾಕರಿಸುತ್ತಿರುವ ವಿಷಯಕ್ಕೆ ಸಂಬಂಧಿಸಿದಂತೆ ನಿಯಮ 330 ರಡಿಯಲ್ಲಿ ನೀಡಿರುವ ಸೂಚನೆಗೆ ಮಾನ್ಯ ಸಹಕಾರ ಸಚಿವರ ಉತ್ತರ.**

*****

2019-20ನೇ ಸಾಲಿಗೆ ಕೇಂದ್ರ ಸರ್ಕಾರವು ಎಫ್.ಎ.ಕ್ಯೂ ಗುಣಮಟ್ಟದ ತೊಗರಿ ಉತ್ಪನ್ನ ಪ್ರತಿ ಕ್ವಿಂಟಾಲಿಗೆ ರೂ.5800/-ಗಳ ಬೆಂಬಲ ಬೆಲೆಯನ್ನು ಘೋಷಿಸಿರುತ್ತದೆ. ಇದರ ಜೊತೆಗೆ ರಾಜ್ಯ ಸರ್ಕಾರದ ವತಿಯಿಂದ ಪ್ರೋತ್ಸಾಹಧನ ಪ್ರತಿ ಕ್ವಿಂಟಾಲಿಗೆ ರೂ.300/- ರಂತೆ ನಿಗದಿಪಡಿಸಿ ಒಟ್ಟಾರೆ ರೂ.6100/-ರಂತೆ ಪ್ರತಿ ಕ್ವಿಂಟಾಲ್ ತೊಗರಿಯನ್ನು ಖರೀದಿಸಲಾಗುತ್ತಿದೆ.

ಕೇಂದ್ರ ಸರ್ಕಾರವು ಬೆಂಬಲ ಬೆಲೆ ಯೋಜನೆಯಡಿ ಗರಿಷ್ಠ 2.27 ಲಕ್ಷ ಮೆಟ್ರಿಕ್ ಟನ್ ತೊಗರಿ ಖರೀದಿಗೆ ಅವಕಾಶ ಕಲ್ಪಿಸಿದ ಹಿನ್ನೆಲೆಯಲ್ಲಿ, ಖರೀದಿ ಪ್ರಕ್ರಿಯೆ ಪ್ರಾರಂಭಿಸಲಾಗಿ, ಒಟ್ಟು 3,17,963 ರೈತರು ನೋಂದಣಿ ಮಾಡಿಕೊಂಡಿದ್ದರು. ಸದರಿ ರೈತರಿಂದ ಪ್ರಾರಂಭದಲ್ಲಿ ಪ್ರತಿ ಎಕರೆಗೆ 5 ಕ್ವಿಂಟಾಲ್‌ನಂತೆ ಹಾಗೂ ಗರಿಷ್ಠ 10 ಕ್ವಿಂಟಾಲ್ ಎಫ್.ಎ.ಕ್ಯೂ ಗುಣಮಟ್ಟದ ತೊಗರಿಯನ್ನು ನಿಗದಿಪಡಿಸಿ ಖರೀದಿಸಲಾಗುತ್ತಿತ್ತು. ಈ ರೀತಿ ಮಿತಿಗೊಳಿಸಿದ ಗರಿಷ್ಠ 10 ಕ್ವಿಂಟಾಲ್ ಬದಲಾಗಿ, 20 ಕ್ವಿಂಟಾಲ್ ತೊಗರಿ ಖರೀದಿಗೆ ಒತ್ತಡಗಳು ಬಂದ ಪರಿಣಾಮವಾಗಿ ಕೇಂದ್ರ ಸರ್ಕಾರಕ್ಕೆ ಬಫರ್ ಸ್ಟಾಕ್ ಯೋಜನೆಯಡಿಯಲ್ಲಿ ತೊಗರಿ ಖರೀದಿಸಲು ಅನುಮತಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ರಾಜ್ಯ ಸರ್ಕಾರದ ಪ್ರಸ್ತಾವನೆಯ ಮೇರೆಗೆ ಕೇಂದ್ರ ಸರ್ಕಾರವು ಹೆಚ್ಚುವರಿಯಾಗಿ 2.00 ಲಕ್ಷ ಮೆಟ್ರಿಕ್ ಟನ್ ತೊಗರಿಯನ್ನು Price Stabilization Fund (ಬಫರ್ ಸ್ಟಾಕ್) ಯೋಜನೆಯಡಿ ಖರೀದಿಸಲು ಅನುಮೋದನೆ ನೀಡಿರುತ್ತದೆ.

ಈ ಹಿನ್ನೆಲೆಯಲ್ಲಿ, ಈ ಹಿಂದೆ ನಿಗದಿಪಡಿಸಿದ ಖರೀದಿ ಪ್ರಮಾಣವನ್ನು ಪ್ರತಿ ಎಕರೆಗೆ 7.5 ಕ್ವಿಂಟಾಲ್‌ನಂತೆ ಹಾಗೂ ಪ್ರತಿ ರೈತರಿಂದ ಗರಿಷ್ಠ 20 ಕ್ವಿಂಟಾಲ್‌ನಂತೆ ತೊಗರಿಯನ್ನು ಖರೀದಿಸಲು ಕ್ರಮವಹಿಸಲಾಗಿರುತ್ತದೆ.

ಕಲ್ಯಾಣ ಕರ್ನಾಟಕ ಭಾಗದ ಮುಖ್ಯ ಬೆಳೆಯಾದ ತೊಗರಿಯನ್ನು ಬೆಂಬಲ ಬೆಲೆ ಯೋಜನೆಯಡಿ 487 ಖರೀದಿ ಕೇಂದ್ರಗಳನ್ನು ತೆರೆದಿದ್ದು, 3,17,963 ರೈತರಿಂದ ಒಟ್ಟು 30,57,100 ಕ್ವಿಂಟಾಲ್ ತೊಗರಿಯನ್ನು ಖರೀದಿಸಲಾಗಿರುತ್ತದೆ.

2019-20ನೇ ಸಾಲಿನ ಬೆಂಬಲ ಬೆಲೆ ಯೋಜನೆಯಡಿ ತೊಗರಿಯನ್ನು NIC ಸಂಸ್ಥೆಯು ಸಿದ್ಧಪಡಿಸಿರುವ ತಂತ್ರಾಂಶದ ಮುಖಾಂತರ ರೈತರ ನೋಂದಣಿಯನ್ನು ಮಾಡಲಾಗಿದೆ. ಬೆಳೆ ದರ್ಶಕದಲ್ಲಿ ರೈತ ಬೆಳೆದಿರುವ ತೊಗರಿ ಬೆಳೆ ನಮೂದಾಗಿರುವ ಸಂದರ್ಭದಲ್ಲಿ ಸದರಿ ರೈತರು ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಿ ಇಂತಹ ಆಕ್ಷೇಪಣೆಗಳು ಬಂದಲ್ಲಿ ಕೃಷಿ ಇಲಾಖೆಯ ಅಧಿಕಾರಿಗಳು ದೃಢೀಕರಿಸಿದ ನಂತರ ರೈತರ ನೋಂದಣಿಯನ್ನು ಮಾಡಿಕೊಳ್ಳಲಾಗಿದೆ. ನೈಜ ಫಲಾನುಭವಿಗಳಿಗೆ ಸರ್ಕಾರದ ಯೋಜನೆಯ ಲಾಭ ದೊರೆಯುತ್ತಿದ್ದು, ರೈತರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಖರೀದಿಗೆ ಎಲ್ಲಾ ರೀತಿಯ ಕ್ರಮವನ್ನು ವಹಿಸಲಾಗಿರುತ್ತದೆ.

**(ಸಂಖ್ಯೆ: ಸಿಒ 209 ಎಂಆರ್‌ಇ 2020)**

ಎಸ್.ಟಿ. ಸೋಮಶೇಖರ್

**(ಎಸ್.ಟಿ. ಸೋಮಶೇಖರ್)**
**ಸಹಕಾರ ಸಚಿವರು**